(ಇಂದು ದಿನಾಂಕಃ 01-03-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ**

1. ಅಪಘಾತವು ದಿಃ 11-06-2021 ರಂದು ದೇಗಲಮಡಿ ಗ್ರಾಮದ ಹತ್ತಿರ ಆಗಿತ್ತು. ಆ ದಿನ ಒಬ್ಬನೆ ನಡೆದುಕೊಂಡು ಹೋಗುತ್ತಿದ್ದೆ. ಅಪಘಾತ ಪಡೆಸಿದ ವಾಹನದ ನೊಂದಣಿ ಸಂಖೆ ನಾನು ನೋಡಿದ್ದೆ. ಅಪಘಾತ ಆಗಿ ನನ್ನ ಮಗ ಸ್ಥಳಕ್ಕೆ ಬರುವವರೆಗೆ ಅಪಘಾತ ಪಡಿಸಿದ ವಾಹನ ಅಲ್ಲಿಯೆ ಇತ್ತಾ ಎಂದರೆ ಸಾಕ್ಷಿ ಅವರು ಹೋಗಿದ್ದರು ಎಂದು ಹೇಳುತ್ತಾರೆ. ಹಿಂದಿನಿಂದ ಗಾಡಿ ಬಂದು ನನಗೆ ಗುದ್ದಿರುತ್ತದೆ. ಆ ವಾಹನ ದೇಗಲಮಡಿ ಗ್ರಾಮದ ಆಗಿತ್ತು. ಅಪಘಾತ ಪಡಿಸಿದ ವ್ಯಕ್ತಿ ನಮ್ಮ ಊರಿನವನಾಗಿದ್ದು ನನಗೆ ಪರಿಚಯ ಇರುತ್ತಾನೆ. ಅಪಘಾತ ಆದ ಒಂದು ವಾರದ ನಂತರ ದೂರು ಕೊಟ್ಟಿರುತ್ತೇನೆ. ಗುಲ್ಬರಗಾದ ಠಾಣೆಯಲ್ಲಿ ಎಫ ಐ ಆರ ಆಗಿರುತ್ತದೆ. ಅಪಘಾತವು ದಿಃ 11-06-2021 ರಂದು ಆಗಿರುತ್ತದೆ ಮತ್ತು ದೂರನ್ನು ಪೋಲಿಸರಿಗೆ ದಿಃ 03-07-2021 ರಂದು ಕೊಟ್ಟಿರುತ್ತೇನೆ ಎಂದರೆ ಸರಿ. ದೂರು ನೀಡಲು 22 ದಿನ ವಿಳಂಬ ಇದೆ ಎಂದರೆ ಸರಿ. ಅಪಘಾತ ಆದ ದಿನ ಮೊದಲು ನನ್ನನ್ನು ಚಿಂಚೋಳಿಯ ಕಾಟಾಪೂರ ಆಸ್ಪತ್ರೆಗೆ ಕರೆದುಕೊಂಡು ಹೋದರು ಅಲ್ಲಿಂದ ಗುಲ್ಬರ್ಗಾದ ಕೊರಳ್ಳಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಗುಲ್ಬರಗಾದ ಕೊರಳ್ಳಾ ಆಸ್ಪತ್ರೆಯಲ್ಲಿ 12 ದಿನ ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿದ್ದಾಗ ಎಮ.ಎಲ್. ಸಿ ಮಾಡಿಸಿರುತ್ತಾರೂ ಇಲ್ಲವೊ ನನಗೆ ಗೊತ್ತಿಲ್ಲ. ಎಮ.ಎಲ್. ಸಿ ಮಾಡಿಸಿರು ದಾಖಲೆ ನ್ಯಾಯಲಯಕ್ಕೆ ಸಲ್ಲಿಸಿಲ್ಲ. ನನ್ನ ಚಿಕಿತ್ಸೆಗಾಗಿ ಎಷ್ಟು ಹಣ ಖರ್ಚಾಗಿದೆ ಎಂದು ತೋರಿಸಲು ಆಸ್ಪತ್ರೆ ಬಿಡುಗಡೆ ಪತ್ರ ಮತ್ತು ಬಿಲ್ಲನ್ನು ಕೊಟ್ಟಿಲ್ಲ ಎಂದರೆ ಸರಿ. ದೂರು ನೀಡಲು 22 ದಿನ ವಿಳಂಬದ ಕಾರಣ ದೂರಿನಲ್ಲಿ ನನ್ನ ಮಗ ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಯಲ್ಲಿದ್ದ ಕಾರಣ ತಡವಾಗಿದೆ ಎಂದು ಹೇಳುತ್ತಾರೆ. ನನಗೆ ಗುಲ್ಬರಗಾದ ಆಸ್ಪತ್ರೆಯಲ್ಲಿದ್ದಾಗ ಸುಮಾರು 4-5 ದಿನ ಪ್ರಜ್ಞೆ ಇರಲಿಲ್ಲ. ನನಗೆ ಪ್ರಜ್ಞೆ ಬಂದಾಗ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಒಂದು ವಾರದ ನಂತರ ನಾನು ಹೇಳಿಕೆ ಕೊಟ್ಟಿರುತ್ತೇನೆ. ನನ್ನ ಹೇಳಿಕೆಯಲ್ಲಿ ಯಾವ ವಾಹನ ಮತ್ತು ಅದರ ಸಂಖ್ಯೆಯ ಬಗ್ಗೆ ಹೇಳಿರುತ್ತೇನೆ. ಯಾವ ಪೋಲಿಸ ಠಾಣೆಯ ಪೋಲಿಸರಿಗೆ ನನ್ನ ಹೇಳಿಕೆ ಕೊಟ್ಟಿರುತ್ತೆನೆ ಎಂದು ನನಗೆ ನೆನಪಿಲ್ಲ. ನನ್ನ ಹೇಳಿಕೆಯ

ಮೇರೆಗೆ ಪೋಲಿಸರು ಎಫ. ಐ. ಆರ ಮಾಡಿಕೊಂಡ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದೂರು ಸಲ್ಲಿಸಿದ 10 ದಿನಗಳ ನಂತರ ನಾನು ನನ್ನ ಹೇಳಿಕೆ ಕೊಟ್ಟಿರುತ್ತೇನೆಎಂದು ಪೋಲಿಸರು ತಮ್ಮ ಅಂತಿಮ ವರದಿಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನಾನು ಸಲ್ಲಿಸಿರುವ ಬಿಲ್ಲಿನಲ್ಲಿ ರೂ.2,000/- ಎಮ.ಎಲ್.ಸಿ ಬಿಲ್ಲು ಎಂದು ಬರೆದಿದ್ದು, ಆ ಎಮ.ಎಲ್.ಸಿ ವರದಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನಗೆ ಡಿಕ್ಕಿ ಪಡಿಸಿದ ವಾಹನ ಕೆಳಗೆ ಬಿದ್ದಿರುತ್ತದೆ. ಗಾಡಿ ಮತ್ತು ಗಾಡಿ ಚಾಲಕ ಬಲಗಡೆ ಬಿದ್ದಿರುತ್ತಾರೆ. ಗಾಡಿಯ ಇಂಡಿಕೇಟರ ಒಡೆದಿತ್ತು. ನನಗೆ ಡಿಕ್ಕಿ ಪಡಿಸಿದ ವಾಹನಕ್ಕೆ ಯಾವುದೇ ಜಖಂ ಆಗಿಲ್ಲ ಎಂದು ಮೋಟರ ವಾಹನ ವಿಶ್ಲೇಷಣೆ ವರದಿಯ ಬರೆದಿದೆ ಎಂದರೆ ಸರಿ. ನನಗೆ ಅಪಘಾತ ಪಡಿಸಿದ ವಾಹನದ ಚಾಲಕ ಓಡಿ ಹೋಗಿರುತ್ತಾನೆ. ಆ ಗಾಡಿಯನ್ನು ಪೋಲಿಸರು ಎಲ್ಲಿ ಜಪ್ತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದ ನಂತರ ನನಗೆ ಡಿಕ್ಕಿ ಪಡಿಸಿದ ವಾಹನ ಮತ್ತು ಅದರ ಚಾಲಕ ಗಾಡಿಯನ್ನು ತೆಗೆದುಕೊಂಡು ಹೋಗಿರುತ್ತಾನೆ ಎಂದರೆ ಸಾಕ್ಷಿ ನನಗೆ ಪ್ರಜ್ಞೆ ಇರುವುದಿಲ್ಲ ನಾನು ನೋಡಿಲ್ಲ ಗಾಡಿ ಸಂಖೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾನೆ. ಅಂತಿಮ ವರದಿಯ ಪ್ರಕಾರ ಅಪಘಾತ ಆಗಿ ಸುಮಾರು 28 ದಿನಗಳ ವರೆಗೆ ಅಪಘಾತ ಪಡಿಸಿದ ವಾಹನ ಸ್ಥಳದಲ್ಲೆ ಇತ್ತು ಎಂದು ಬರೆದಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಗುನ್ನೆ ಸ್ಥಳದಿಂದ ವಾಹನವನ್ನು ಜಪ್ತಿ ಮಾಡಲಾಗಿತ್ತು ಎಂದು ಬರೆದಿದೆ ಎಂದರೆ ಸರಿ. ನನಗೆ ಯಾವುದೋ ಗಾಡಿ ಅಪಘಾತ ಪಡಿಸಿ ಹೋಗಿದ್ದು ನಾನು ಬೇರೆ ಯಾವುದೇ ವಾಹನದ ಮೇಲೆ ಸುಳ್ಳು ದೂರನ್ನುಸಲ್ಲಿಸಿದ್ದರಿಂದ ಅದು ಗೊತ್ತಾಗಬಾರದು ಎಂಬ ಉದ್ದೇಶದಿಂದ ನನ್ನ ಆಸ್ಪತ್ರೆಯ ಬಿಲ್ಲುಗಳನ್ನು ಹಾಗೂ ಬಿಡುಗಡೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಪಘಾತ ಆದಾಗ ನಾನು ಯಾವುದೇ ವಾಹನ ನೋಡಿಲ್ಲ. ಅಪಘಾತ ಆದ ಸಮಯದಲ್ಲಿ ಅಪಘಾತ ಸ್ಥಳದಲ್ಲಿ ನನ್ನನ್ನು ಬಿಟ್ಟು ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಅಪಘಾತ ಆದ ನಂತರ ಆ ವಾಹನ ಅಲ್ಲಿಂದ ಹೋದ ನಂತರ ನನ್ನ ಮಗ ಸ್ಥಳಕ್ಕೆ ಬಂದಿರುತ್ತಾನೆ ಎಂದರೆ ಸರಿ. ಅಲ್ಲಿಂದ ನನ್ನ ಮಗ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿ. ನಾನು ದಿನಾಂಕಃ 11-06-2021 ರಿಂದ 16-06-2021 ರ ವರೆಗೆ ಆಸ್ಪತ್ರೆಯಲ್ಲಿದ್ದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಆಸ್ಪತ್ರೆಯಿಂದ ಬಂದು 17 ದಿನಗಳ ನಂತರ ನನ್ನ ಮಗ ಹೋಗಿ ದೂರು ಕೊಟ್ಟಿರುತ್ತಾನೆ ಎಂದರೆ ಸರಿ. ಇದೆ ವಾಹನ ಡಿಕ್ಕಿ ಪಡೆಸಿರುತ್ತದೆ ಎಂದು ನನ್ನ ಮಗನಿಗೆ ನಮ್ಮ ಪಕ್ಕದ ಜಮೀನಿನವರಾದ ವಿನೋದ ಕುಮಾರ ಎಂಬುವವರು ಹೇಳಿರುತ್ತಾರೆ.

ವಿನೋದ ಕುಮಾರ ಮತ್ತು ವಿಲಾಸರವರು ಸ್ಥಳ ಮಹಜರ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ಬರೆದಿದೆ ಎಂದರೆ ಸಾಕ್ಷಿ ವಿನೋದ ಕುಮಾರ ಬಂದು ನನ್ನ ಮಗನಿಗೆ ಹೇಳಿರುತ್ತಾರೆ ಎಂದು ಹೇಳುತ್ತಾರೆ. ವಿನೋದ ಕುಮಾರವರು ಅಪಘಾತವನ್ನು ನೋಡಿರುತ್ತಾರೆ ಎಂದು ಅಂತಿಮವರದಿಯಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಅದನ್ನು ಪೋಲಿಸರು ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಂತಿಮ ವರದಿ ತಪ್ಪು ಇದೆ ಎಂದು ನಾನು ಅಥವಾ ನನ್ನ ಮಗ ಅದನ್ನು ಪ್ರಶ್ನಿಸಿರುವುದಿಲ್ಲ. ಅಂತಿಮ ವರದಿಯಿಲ್ಲಿ ತೋರಿಸಿದ ಎಲ್ಲಾ ಸಾಕ್ಷಿದಾರರು ದೇಗಲ ಮಡಿ ಗ್ರಾಮದವರು ಎಂದರೆ ಸರಿ. ಅಂತಿಮ ವರದಿಯಿಲ್ಲಿ ತೋರಿಸಿದ ಎಲ್ಲಾ ಸಾಕ್ಷಿದಾರರ ಪೈಕಿ ಯಾರು ಕೂಡ ಅಪಘಾತ ಕಣ್ಣಾರೆ ನೊಡಿರುತ್ತಾರೆ ಎಂದು ಬರೆದಿಲ್ಲ ಎಂದರೆ ಸರಿ. ನಾನು ಎಮ.ಎಲ್.ಸಿ ಕಾಪಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೊ ಇಲ್ಲವೊ ನನಗೆ ಗೊತ್ತಿಲ್ಲ. ನನ್ನ ಚಿಕಿತ್ಸೆಗಾಗಿ 5 ಲಕ್ಷ ಖರ್ಚು ಆಗಿದೆ ಎಂದು ತೋರಿಸಲು ಬಿಲ್ಲನ್ನು ಸಲ್ಲಿಸಿಲ್ಲ ಎಂದರೆ ಸರಿ. ನನಗೆ ಮುಂದಿನ ಚಿಕಿತ್ಸೆಗಾಗಿ 2 ಲಕ್ಷ ಹಣ ಬೇಕಾಗಿದೆ ಎಂದು ಯಾವುದೇ ತೋರಿಸಲು ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ಆಧಾರ ಕಾರ್ಡನ ಪ್ರಕಾರ ಅಪಘಾತ ಆದಾಗ ನನ್ನ ವಯಸ್ಸು 51 ವರ್ಷ ಎಂದರೆ ಸಾಕ್ಷಿ 48 ಇರುತ್ತದೆ ಎಂದು ಹೇಳುತ್ತಾರೆ. ನನ್ನ ಆಸ್ಪತ್ರೆಯ ದಾಖಲೆಗಳಲ್ಲಿ ನನ್ನ ವಯಸ್ಸು 51 ವರ್ಷ ಎಂದು ಬರೆದಿರುತ್ತಾರೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ನನೆಗ 45 ವರ್ಷ ಸುಳ್ಳು ಬರೆಸಿರುತ್ತೇನೆ ಎಂದರೆ ಸಾಕ್ಷಿ ನನಗೆ 48 ವರ್ಷ ಆಗಿದೆ ಎಂದು ಹೇಳುತ್ತಾರೆ.

2. ನಾನು ಒಕ್ಕಲು ತನ ಮಾಡುತ್ತೇನೆ. ಅದರ ಬಗ್ಗೆ ಪಹಣಿ ಸಲ್ಲಿಸಿಲ್ಲ. ನನಗೆ ಜಮೀನು ಇರುತ್ತದೆ. ಅಪಘಾತಕಿಂತ ಮೊದಲು ಮತ್ತು ಈಗಲು ಜಮೀನಿನಲ್ಲಿ ಬೆಳೆ ಬೆಳೆಯುತ್ತಿದ್ದೇನೆ ಎಂದರೆ ಸರಿ.ನಾನು ಹಾಲು ಮಾರಾಟ ಮಾಡುತ್ತಿದ್ದು ಹೋಟಲಗಳಿಗೆ ಹಾಕುತ್ತಿದ್ದೆ. ನಾಲ್ಕು ಎಮ್ಮೆಗಳಿವೆ. ಎಮ್ಮೆಗಳಿಗೆ ಗ್ರಾಮ ಪಂಚಾಯಿತಿಯಲ್ಲಿ ಟೋಕನ ಸಂಖ್ಯೆ ಕೊಡುತ್ತಾರೆ ಎಂದರೆ ಸರಿ. ಅದರ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ಒಕ್ಕಲು ತನ ಮಾಡುತ್ತಿದ್ದು ಹಾಲು ಮಾರಾಟ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ತೊಂದರೆ ಆಗಿಲ್ಲ ಎಂದರೆ ಸಾಕ್ಷಿ ನನಗೆ ಈಗಲು ನಡೆದಾಡಲು ಆಗುತ್ತಿಲ್ಲ ಎಂದು ಹೇಳುತ್ತಾರೆ. ನನಗೆ ವಾಹನ ಸಂಖ್ಯೆ ಕೆ.ಎ 32 ಇಎಕ್ಸ 4977 ವಾಹನದಿಂದ ಯಾವುದೇ ಅಪಘಾತ ಆಗದಿದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ

ಎಂದರೆ ಸರಿಯಲ್ಲ. ನಾನು ಯಾವುದೇ ಆಧಾರ ಇಲ್ಲದೆ ಅರ್ಜಿ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.

(ಇಂದು ದಿನಾಂಕಃ 01-03-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಎನ.ಎಚ.ಆರ ಅರ್ಜಿದಾರರ ಪರ ವಕೀಲರಿಂದಃ**

ಆಸ್ಪತ್ರೆ ಬಿಡುಗಡೆ ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಪಿ-10 ಎಂದು ಗುರುತಿಸಲಾಯಿತು.

ಆಧಾರ ಕಾರ್ಡ ಹಾಜರುಪಡಿಸಿದ್ದು ಅದನ್ನು ನಿ.ಪಿ-11 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ**

1. ನಿ.ಪಿ-10 ರಲ್ಲಿ ನನಗೆ ಗಾಯಗಳು ಅಪಘಾತದಿಂದ ಆಗಿದೆ ಎಂದು ಎಲ್ಲಿಯು ಬರೆದಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.